# ಶ್ರೀರಾಮಕೃಷ್ಣ-ನರೇಂದ್ರ

ಸ್ವಾಮಿ ಆತ್ಮಜ್ಞಾನಂದ

**ಶ್ರೀರಾಮಕೃಷ್ಣ ಮತ್ತು ನರೇಂದ್ರರ ಅಪಾರ್ಥಿವ ಸಂಬಂಧ ತುಂಬ ಅಪೂರ್ವವೂ ಅನನ್ಯವೂ ಆದುದು. ಆ ಮನೋಜ್ಞ ಸಂಬಂಧವನ್ನು ಕುರಿತಾದ ಈ ಲೇಖನವನ್ನು ಬರೆದಿರುವ ಸ್ವಾಮಿ ಆತ್ಮಜ್ಞಾನಂದಜಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

ಶ್ರೀರಾಮಕೃಷ್ಣರ ಜೀವನದಲ್ಲಿ ಪ್ರಮುಖವಾಗಿ ಎದ್ದು ಕಾಣುವಂತಹ ಭಾವವೇ ಅವರ ಅತ್ಯದ್ಭುತವಾದ ಪ್ರೇಮ. ಭಗವಂತನಲ್ಲಿ ಅವರಿಗಿದ್ದ ಅತುಲ ಪ್ರೇಮವೇ ನಂತರ ಶಿಷ್ಯರತ್ತ, ಆಧ್ಯಾತ್ಮಿಕ ಪಿಪಾಸುಗಳತ್ತ ಕರುಣೆಯ ರೂಪದಲ್ಲಿ ಹರಿದು ಅವರ ಆಧ್ಯಾತ್ಮಿಕ ಜೀವನವನ್ನು ಹಸನಾಗಿಸಿತು. ಸಾಧಕರಾಗಿದ್ದ ಕಾಲದಲ್ಲಿ ಶ್ರೀರಾಮಕೃಷ್ಣರ ಅದ್ಭುತವಾದ ವ್ಯಾಕುಲತೆಯನ್ನು ಕಾಣುತ್ತೇವೆ. ಭಗವತ್ಪ್ರೇಮದಿಂದ ಉನ್ಮತ್ತರಾಗಿದ್ದ ಸ್ಥಿತಿಯಲ್ಲಿ ಪ್ರತಿದಿನ ಸಂಜೆಯಾದಾಗ ಅವರು ಅಸಹನೀಯ ದುಃಖ-ನೋವುಗಳನ್ನು ಅನುಭವಿಸುತ್ತ ತಮ್ಮ ಮುಖವನ್ನು ನೆಲದ ಮೇಲೆ ಉಜ್ಜುತ್ತ, "ಮತ್ತೊಂದು ದಿನವು ಕಳೆಯಿತಲ್ಲ, ತಾಯಿ! ನಿನ್ನನ್ನು ಇನ್ನೂ ನಾನು ನೋಡಲಿಲ್ಲವಲ್ಲ!" ಎಂದು ಅಳುತ್ತಿದ್ದರು. ಸಾಧನೆಯ ಅಂತ್ಯದಲ್ಲಿ ಇದೇ ವ್ಯಾಕುಲತೆಯನ್ನು ವ್ಯಕ್ತಪಡಿಸುತ್ತ ಪ್ರತಿ ಸಂಜೆ ದಕ್ಷಿಣೇಶ್ವರದ ಅತಿಥಿಗೃಹದ ಮಹಡಿಯ ಮೇಲೇರಿ ಶಿಷ್ಯರನ್ನು ಕೂಗಿ ಕರೆಯುತ್ತಿದ್ದರು : "ನೀವೆಲ್ಲಿರುವಿರಿ, ಬನ್ನಿ! ಬನ್ನಿ! ನೀವಿಲ್ಲದೆ ನಾನಿರಲಾರೆ." ತಾವು ಸಾಧಕರಾಗಿ ಸಾಧಿಸಿದ್ದನ್ನು ಅರ್ಹವ್ಯಕ್ತಿಗಳಿಗೆ ಧಾರೆಯೆರೆದು, ತಾವು ಅವತರಿಸಿದ ಕಾರಣವನ್ನು ಸಫಲಗೊಳಿಸಲು ಕಾತರರಾಗಿದ್ದರು. ಭಗವಂತನ ಕರುಣೆಯ ಪ್ರತಿಮೂರ್ತಿಯೋ ಎಂಬಂತೆ ತಾವೇ ಅವರನ್ನು ಅರಸುತ್ತ ಹೊರಟು ಕೃಪೆ ತೋರಿದರು.



ನನ್ನ ನರೇಂದ್ರನು ಸ್ವಲ್ಪವೂ ಬೆರಕೆ ಲೋಹವಿಲ್ಲದ ಒಂದು ನಾಣ್ಯ. ಅದನ್ನು ಹೊಡೆದರೆ ಅತ್ಯಂತ ಯಥಾರ್ಥವಾದ ಶಬ್ದ ಬರುತ್ತದೆ.
— *ಶ್ರೀರಾಮಕೃಷ್ಣ*

ನರೇಂದ್ರನನ್ನು ಕಂಡದ್ದೂ ಹೀಗೆಯೇ. ನರೇಂದ್ರನೊಡನೆ ಅವರ ಪ್ರಥಮ ಭೇಟಿಯಾದದ್ದು ಕಲ್ಕತ್ತೆಯ ಸಿಮ್ಲಾ ವಿಭಾಗದಲ್ಲಿ ವಾಸಿಸುತ್ತಿದ್ದ ಸುರೇಂದ್ರನಾಥ ಮಿತ್ರನ ಮನೆಯಲ್ಲಿ. ಆಗ ಕ್ರಿ.ಶ. ೧೮೮೧ ನವೆಂಬರ್ ತಿಂಗಳು. ಆಗ ನರೇಂದ್ರನಿಗೆ ಹದಿನೆಂಟು ವರ್ಷ. ಅವನು ಕಲ್ಕತ್ತಾ ವಿಶ್ವವಿದ್ಯಾನಿಲಯದ ಎಫ್.ಎ. ಪರೀಕ್ಷೆಗಾಗಿ ಓದುತ್ತಿದ್ದ. ಸುರೇಂದ್ರನ ಮನೆಯಲ್ಲಿ ಆಯೋಜಿಸಲಾಗಿದ್ದ ಸಂಕೀರ್ತನೆಯಲ್ಲಿ ನರೇಂದ್ರನನ್ನು ಕಂಡು ಶ್ರೀರಾಮಕೃಷ್ಣರು ಆಕರ್ಷಿತರಾದರು. ರಾಮಚಂದ್ರ ಮೊದಲಾದ ಭಕ್ತರಿಂದ ಅವನ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಅವನನ್ನು ಬಳಿಗೆ ಕರೆದು ದೇಹ ಲಕ್ಷಣಗಳನ್ನು ಪರೀಕ್ಷಿಸಿ, ದಕ್ಷಿಣೇಶ್ವರಕ್ಕೆ ಬಾರೆಂದು ಆಹ್ವಾನವಿತ್ತರು. ಅವನಲ್ಲಿನ ವಿಶೇಷತೆಯನ್ನು ಕಂಡಕೂಡಲೆ ಗಮನಿಸಿದ್ದ ಅವರ ತೀಕ್ಷ್ಣದೃಷ್ಟಿ ಅವನ ಬರವಿಗಾಗಿ ಹಾತೊರೆಯುವಂತೆ ಮಾಡಿತ್ತು ಅವರನ್ನು. ನರೇಂದ್ರನಿಗೆ ಇನ್ನೂ ಅವರಲ್ಲಿ ಅಷ್ಟು ಆಸಕ್ತಿ ಕೆರಳಿರಲಿಲ್ಲ.

ಕೆಲವು ವಾರಗಳ ನಂತರ ನರೇಂದ್ರನು ಕೆಲವು ಮಿತ್ರರೊಡನೆ ದಕ್ಷಿಣೇಶ್ವರಕ್ಕೆ ಬಂದಾಗ ಶ್ರೀರಾಮಕೃಷ್ಣರ ಪ್ರೇಮದ ಕಂಪು ಅವನ ಮೈ ಮನಗಳನ್ನಾವರಿಸಿತು. ಶ್ರೀರಾಮಕೃಷ್ಣರ ಇಚ್ಛೆಯಂತೆ ಬ್ರಹ್ಮ ಸಮಾಜದ ಒಂದು ಹಾಡನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿದ. ಆ ಹಾಡನ್ನು ಕೇಳಿ ಶ್ರೀರಾಮಕೃಷ್ಣರು ಭಾವಾವಿಷ್ಟರಾಗಿ ಬಿಟ್ಟರು. ನರೇಂದ್ರನೇ ನಂತರ ಹೇಳಿದಂತೆ, "ಹಾಡನ್ನಂತೂ ಹಾಡಿದೆ. ಇದಾದ ಕೂಡಲೇ ಶ್ರೀರಾಮಕೃಷ್ಣರು ಮೇಲೆದ್ದು ನನ್ನ ಕೈಯನ್ನು ಹಿಡಿದು ಕರೆದುಕೊಂಡು ಹೋದರು. ವರಾಂಡಕ್ಕೆ ಬಂದಕೂಡಲೇ ಶ್ರೀರಾಮಕೃಷ್ಣರು ಬಾಗಿಲನ್ನು ಮುಚ್ಚಿದರು... ಅವರು ಇದ್ದಕ್ಕಿದ್ದಂತೆ ನನ್ನ ಕೈಗಳನ್ನು ಹಿಡಿದುಕೊಂಡು ಧಾರಾಕಾರವಾಗಿ ಆನಂದ ಬಾಷ್ಪವನ್ನು ಸುರಿಸಿದರು. ತುಂಬ ಪರಿಚಿತರನ್ನು ಮಾತನಾಡಿಸುವಂತೆ ಪ್ರೀತಿಯಿಂದ ಹೇಳಿದರು: 'ನೀನು ಇಷ್ಟು ತಡವಾಗಿ ಬರುವುದು ಸರಿಯೇ? ನಾನು ನಿನಗಾಗಿ ಕಾಯುತ್ತಿದ್ದೆ ಎಂಬುದನ್ನು ನೀನು ಯೋಚನೆ ಮಾಡಲೇ ಇಲ್ಲವಲ್ಲ. ಪ್ರಾಪಂಚಿಕರ ವ್ಯರ್ಥಾಲಾಪವನ್ನು ಕೇಳಿ ಕೇಳಿ ನನ್ನ ಕಿವಿ ಸುಟ್ಟು ಹೋಗುತ್ತಿದೆ ನನ್ನ ಆಂತರಿಕ ಭಾವನೆಗಳನ್ನು ಯಾರಿಗೂ ಹೇಳಲಾಗದೆ ನಾನು ಒಡೆದುಹೋಗುವುದರಲ್ಲಿದ್ದೆ.' ಹೀಗೆ ಎಷ್ಟೆಲ್ಲ ಮಾತನಾಡಿದರು ಮತ್ತು ರೋದಿಸಿದರು! ಮರುಕ್ಷಣದಲ್ಲಿಯೇ ನನ್ನ ಮುಂದೆ ಕೈಜೋಡಿಸಿ ನಿಂತು ನನ್ನನ್ನು ದೇವತೆಯಂತೆ ಸನ್ಮಾನಿಸುತ್ತ ಹೇಳಿದರು: 'ಪ್ರಭು ನೀನು

ಯಾರೆಂಬುದು ನನಗೆ ಗೊತ್ತು, ನೀನು ಅದೇ ಪುರಾತನ ಋಷಿ, ನರರೂಪಿ ನಾರಾಯಣ. ಜೀವಿಗಳ ದುರ್ಗತಿಯನ್ನು ನಿವಾರಿಸುವುದಕ್ಕಾಗಿ ಪುನಃ ಶರೀರವನ್ನು ಧರಿಸಿರುವೆ.'

"ಅವರ ಈ ರೀತಿಯ ಆಚರಣೆಯನ್ನು ನೋಡಿ ನಾನು ಸ್ತಂಭಿತನಾದೆ. ನಾನು ಯಾರನ್ನು ನೋಡಲು ಬಂದಿರುವೆ, ಇವರಂತೂ ಸಂಪೂರ್ಣ ಹುಚ್ಚು ಎಂದು ಮನಸ್ಸಿನಲ್ಲಿಯೇ ಭಾವಿಸಿದೆ ... ಸ್ವಲ್ಪ ಹೊತ್ತಿನ ನಂತರ ಅವರು ನನ್ನನ್ನು ಅಲ್ಲಿಯೇ ಇರಲು ಹೇಳಿ ಕೊಠಡಿಯನ್ನು ಪ್ರವೇಶಿಸಿದರು. ಬೆಣ್ಣೆ, ಕಲ್ಲುಸಕ್ಕರೆ ಮತ್ತು ಸ್ವಲ್ಪ ಸಂದೇಶ್(ಸಿಹಿತಿಂಡಿ)ಗಳನ್ನು ತಂದು ಅವುಗಳನ್ನು ತಮ್ಮ ಕೈಗಳಿಂದಲೇ ತಿನ್ನಿಸತೊಡಗಿದರು... 'ಏಕಾಂಗಿಯಾಗಿ ಬೇಗನೆ ಒಂದು ದಿನ ಬರುತ್ತೀಯಾ?' ಎನ್ನುವ ಅವರ ಪ್ರೀತಿಯ ಪ್ರಶ್ನೆಗೆ ಆಗುವುದಿಲ್ಲ ಎನ್ನಲಾಗದೆ 'ಆಗಲಿ, ಬರುತ್ತೇನೆ' ಎಂದು ಹೇಳಿದೆ".

ಶ್ರೀರಾಮಕೃಷ್ಣರ ಈ ವಿಚಿತ್ರ ವರ್ತನೆ ನರೇಂದ್ರನಲ್ಲಿ ಅವರ ಬಗ್ಗೆ ಸಂಶಯ ಮೂಡಿಸಿತು. ಇವರು ಹುಚ್ಚರಿರಬಹುದು ಎಂದು ಭಾವಿಸಿದ. ಆದರೆ ಅವರು ಕೊಠಡಿಯಲ್ಲಿ ಕುಳಿತಿದ್ದಾಗ ಅವರ ವರ್ತನೆಯಲ್ಲಿ ಯಾವುದೇ ಏರುಪೇರಿರಲಿಲ್ಲ. ಭಗವಂತನ ವಿಷಯವನ್ನು ಕುರಿತು ತಲ್ಲೀನರಾಗಿರುತ್ತಿದ್ದರು. ಅವರ ತ್ಯಾಗ ಹಾಗೂ ಪವಿತ್ರ ಜೀವನ ಅವನನ್ನು ಸಂಪೂರ್ಣ ಆಕರ್ಷಿಸಿತು.

ಶ್ರೀರಾಮಕೃಷ್ಣರು ನರೇಂದ್ರನನ್ನು ಜಗತ್ತಿನ ಕಲ್ಯಾಣಕ್ಕಾಗಿ, ಹೊಸ ಆದರ್ಶಗಳನ್ನು ಜಗತ್ತಿನಾದ್ಯಂತ ಬಿತ್ತರಿಸುವ ವಾಹಕನಾಗಿ ಪರಿವರ್ತಿಸಲು ತವಕಿಸುತ್ತಿದ್ದರು. ನರೇಂದ್ರನ ಬರವಿಗಾಗಿ ಹುಚ್ಚರಂತೆ ಕಾದಿರುತ್ತಿದ್ದರು. ಹಗಲೂ ರಾತ್ರಿ "ನರೇನ್, ನರೇನ್" ಎಂದು ವಿಲಪಿಸುತ್ತ ಒದ್ದೆ ಬಟ್ಟೆಯನ್ನು ಹಿಂಡಿದಂತೆ ಅಸಹನೀಯ ಅಂತರಂಗದ ವೇದನೆಯನ್ನು ಅನುಭವಿಸುತ್ತಿದ್ದರು. ನರೇಂದ್ರನನ್ನು ಕಾಣದಾಗ ಇಷ್ಟೊಂದು ಯಾತನೆಯೇ? ಇತರ ಭಕ್ತರಿಗೆ ಇದನ್ನು ಕಂಡು ಆಶ್ಚರ್ಯವಾಗುತ್ತಿತ್ತು. ಇದೆಂತಹ ವ್ಯಾಮೋಹ? ಅದೇನು ನರೇಂದ್ರನಲ್ಲಿರುವ ವಿಶೇಷತೆ? ಆದರೆ ಮರುಕ್ಷಣವೇ ಎಲ್ಲವನ್ನೂ ಮರೆತು ಸಮಾಧಿಯಲ್ಲಿ ಲೀನವಾಗುತ್ತಿದ್ದರು. ನರೇಂದ್ರನಿಗೂ ಇದು ಅರ್ಥವಾಗದೆ ಬಹಳ ಕಸಿವಿಸಿಯಾಗುತ್ತಿತ್ತು. ಇವನು ದಕ್ಷಿಣೇಶ್ವರಕ್ಕೆ ಬಂದೊಡನೆಯೇ ಸಂಪೂರ್ಣವಾಗಿ ಇವನತ್ತ ಮಗ್ನರಾಗಿ "ನರೇನ್, ತಿನ್ನು" ಎಂದು ವಿಧವಿಧದ ತಿನಿಸುಗಳನ್ನು ತಿನಿಸುವುದು, ಇವನ ಗುಣಗಳನ್ನು ಎಲ್ಲರ ಮುಂದೆ ಬಣ್ಣಿಸುವುದು, ಕೇಶವಚಂದ್ರಸೇನ ಮುಂತಾದ ಸಮಾಜದ ಗಣ್ಯವ್ಯಕ್ತಿಗಳಿಗಿಂತ ಇವನು ಶ್ರೇಷ್ಠನೆಂದು ಹೇಳುವುದು ಇವನ್ನೆಲ್ಲ ಕಂಡು ಇತರ ಭಕ್ತರಿಗೂ ಬೇಸರವಾಗುತ್ತಿತ್ತು –ನಾವೆಲ್ಲ ಗಂಗೆಯ ಪ್ರವಾಹದಲ್ಲಿ ತೇಲಿ ಬಂದವರೇ?" ಎಂದು ವ್ಯಂಗ್ಯ ಮಾಡುತ್ತಿದ್ದರು. ಹಾಜರಾ ಎಂಬುವವನು ವರಾಂಡದಲ್ಲಿ ಕುಳಿತು ಶ್ರೀರಾಮಕೃಷ್ಣರ ಈ ವರ್ತನೆಯನ್ನು ಲೇವಡಿ ಮಾಡುತ್ತಿದ್ದ. ನರೇಂದ್ರನೂ ಒಮ್ಮೆ ಬೇಸರದಿಂದ : "ನೀವು ಹೀಗೆ 'ನರೇನ್, ನರೇನ್' ಎನ್ನುತ್ತಿದ್ದರೆ ಕೊನೆಗೆ ಭರತರಾಜನ ಅವಸ್ಥೆಯಾದೀತು!" ( ಭರತನು ಸಾಯುವಾಗ ಜಿಂಕೆಯನ್ನು ಚಿಂತಿಸುತ್ತಿದ್ದರಿಂದ ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದನು.) ಎಂದು ಎಚ್ಚರಿಕೆ ನೀಡಿದ.

ಶ್ರೀರಾಮಕೃಷ್ಣರಿಗೆ ಇದಾವುದರ ಪರಿವೆಯೂ ಇರಲಿಲ್ಲ. ನರೇಂದ್ರನ ಮೂರನೆಯ ಭೇಟಿಯಲ್ಲಿಯೇ ಅವನಿಗೆ ನಿರ್ವಿಕಲ್ಪ ಸಮಾಧಿಯ ಅನುಭವವನ್ನು ನೀಡಬಯಸಿದ್ದರು. ಆದರೆ ಅದನ್ನು ಸ್ವೀಕರಿಸಲು ನರೇಂದ್ರನಿನ್ನೂ ತಯಾರಿರಲಿಲ್ಲ. ಅವನ ಜೀವನದ ಆದರ್ಶಗಳಿನ್ನೂ ನಿಶ್ಚಿತವಾಗಿರಲಿಲ್ಲ. ಎರಡು ದೃಶ್ಯಗಳು ಅವನ ಕಣ್ಣ ಮುಂದೆ ತೋರುತ್ತಿದ್ದವು. ಐಶ್ವರ್ಯಗಳನ್ನೂ ಸುಖವನ್ನೂ ಹೊಂದಿರುವ ಒಬ್ಬ ಸಮಾಜದ ಹಿರಿಯ ವ್ಯಕ್ತಿಯ ಚಿತ್ರವೊಂದಾದರೆ, ಸರ್ವತ್ಯಾಗಿ ಸಂನ್ಯಾಸಿಯದು ಮತ್ತೊಂದು ಚಿತ್ರ. ಈ ಎರಡು ಆದರ್ಶಗಳ ನಡುವಿನ ಹೊಯ್ದಾಟದಲ್ಲಿ ಅವನ ಮನಸ್ಸಿನ್ನೂ ಆಧ್ಯಾತ್ಮಿಕ ಅನುಭವವನ್ನು ಪಡೆಯಲು ಸಿದ್ಧವಿರಲಿಲ್ಲ.

> **ಸ್ವಾಮೀಜಿ ಮುಖಾಂತರ ಜಗತ್ತು ಶ್ರೀರಾಮಕೃಷ್ಣರ ಬಗ್ಗೆ ತಿಳಿದುಕೊಂಡಿತು. ಅವರಿಲ್ಲದೆ ಇದ್ದಿದ್ದರೆ ಶ್ರೀರಾಮಕೃಷ್ಣರ ಅದ್ಭುತ ಪ್ರತಿಭೆ ಎಲ್ಲೋ ಅತ್ಯಲ್ಪ ಮಂದಿಗೆ ಮಾತ್ರ ಅರ್ಥವಾಗುತ್ತಿತ್ತು.**
>
> – *ಸ್ವಾಮಿ ಬ್ರಹ್ಮಾನಂದ*

ನರೇಂದ್ರನು ಸಣ್ಣ ಪ್ರಾಯದಿಂದಲೇ ಆಧುನಿಕ ವಿಚಾರಗಳಲ್ಲಿ ಅತ್ಯಂತ ಆಸಕ್ತನಾಗಿದ್ದ. ಪಾಶ್ಚಾತ್ಯದ ಪ್ರಸಿದ್ಧ ದಾರ್ಶನಿಕರ ಮತಗಳನ್ನೆಲ್ಲ ಅಧ್ಯಯನ ಮಾಡಿ ಪ್ರವೀಣನಾಗಿದ್ದ. ಸತ್ಯಾನ್ವೇಷಣೆಯ ಭರದಲ್ಲಿ ಎಲ್ಲರೊಡನೆ ವಾದಮಾಡಿ ನಿಜದ ಸುಳಿವಿಗಾಗಿ ಕೈ ಚಾಚಿದ್ದ. ಎಲ್ಲವನ್ನೂ ಪರೀಕ್ಷಿಸಿನೋಡಿ, ಯುಕ್ತಿಸಮ್ಮತವಾದಲ್ಲಿ ಮಾತ್ರ ಸ್ವೀಕರಿಸುತ್ತಿದ್ದ. ಇಂತಹ ನರೇಂದ್ರನನ್ನು ಒಲಿಸಿಕೊಳ್ಳಲು ಶ್ರೀರಾಮಕೃಷ್ಣರು ಪ್ರಯೋಗಿಸಿದ ಅಸ್ತ್ರಗಳೆರಡು: "ನಾನು ಭಗವಂತನನ್ನು ಸಮೀಪದಿಂದ ನೋಡಿದ್ದೇನೆ, ಅವನೊಡನೆ ಮಾತನಾಡಿದ್ದೇನೆ; ನೀನು ಕೂಡ ಅವನನ್ನು ಕಾಣಬಹುದು" ಎಂಬ ಅನುಭವವಾಣಿ ಹಾಗೂ ನಿಃಸ್ವಾರ್ಥಪ್ರೀತಿಯ ಬಂಧನ.

ಶ್ರೀರಾಮಕೃಷ್ಣರು ಕ್ರಮೇಣ ಅವನ ಮನಸ್ಸಿನ ಮೇಲೆ ಪ್ರಭುತ್ವವನ್ನು ಸಾಧಿಸಿದರು. ತ್ಯಾಗದ ಆದರ್ಶವನ್ನು ಒಂದೆಡೆ ಅವನಲ್ಲಿ ತುಂಬುತ್ತಿದ್ದರು. ಅದ್ವೈತದ ವಿಚಾರಗಳನ್ನು ಪ್ರತಿಪಾದಿಸುವ ಗ್ರಂಥಗಳನ್ನು ಅವನಿಂದ ಓದಿಸುತ್ತಿದ್ದರು, ತಾತ್ತ್ವಿಕ ವಿಚಾರಗಳ ಕೂಲಂಕಷ ಚರ್ಚೆ ಮಾಡುವಂತೆ ಉತ್ತೇಜನವನ್ನೂ ನೀಡುತ್ತಿದ್ದರು, ಎಲ್ಲೆಡೆಯೂ ಭಗವಂತನಿರುವನು ಎಂಬ ತತ್ತ್ವವನ್ನು ಅವನಿಗೆ ಅನುಭವಗಮ್ಯ ಮಾಡಿದರು. ಅವನು ಜಗನ್ಮಾತೆ ಕಾಳಿಯನ್ನು, ಒಪ್ಪಿಕೊಳ್ಳುವಂತೆ ಮಾಡಿದರು. ಅವನು ಎಂದು ಕಾಳಿಯನ್ನು–

ಭಗವಂತನ ಲೀಲಾ ಶಕ್ತಿಯನ್ನು ಸ್ವೀಕರಿಸುವನೋ ಎಂದು ನಿರೀಕ್ಷಿಸುತ್ತಿದ್ದರು. ತಾವು ಸಾಧನೆಯ ಮೂಲಕ ಕಂಡುಕೊಂಡಿದ್ದ ಸಮದರ್ಶನವನ್ನು, ಜ್ಞಾನ-ಭಕ್ತಿಗಳ ಸಮನ್ವಯವನ್ನು ಅವನು ಸ್ವೀಕರಿಸದೆ ಬಂದ ಕೆಲಸ ಪೂರೈಸುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು. ತಮ್ಮನ್ನು ಸಂಪೂರ್ಣವಾಗಿ ತಿಳಿದು, ತಿಳಿದಿದ್ದನ್ನು ಅರ್ಥವಾಗುವಂತೆ ಜಗತ್ತಿಗೆ ನೀಡುವುದು ನರೇಂದ್ರನೊಬ್ಬನಿಂದಲೇ ಸಾಧ್ಯವೆಂದು ಅವರು ತಿಳಿದಿದ್ದರು.

**ಶ್ರೀರಾಮಕೃಷ್ಣರು ಮತ್ತು ಸ್ವಾಮೀಜಿ ಒಂದೇ ನಾಣ್ಯದ ಎರಡು ಮುಖಗಳು. ನಮ್ಮಲ್ಲಿ ಶ್ರೀರಾಮಕೃಷ್ಣ ರನ್ನು ನಿಜವಾಗಿ ಅರ್ಥಮಾಡಿಕೊಂಡವರು ಸ್ವಾಮೀಜಿ ಒಬ್ಬರೇ...... ಅವರನ್ನು ಅರ್ಥಮಾಡಿಕೊಳ್ಳದೆ ಶ್ರೀರಾಮಕೃಷ್ಣರನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ.**

***–ಸ್ವಾಮಿ ಪ್ರೇಮಾನಂದ***

ನರೇಂದ್ರನು ಮತ್ತೆ ಮತ್ತೆ ಶ್ರೀರಾಮಕೃಷ್ಣರನ್ನು ಪರೀಕ್ಷೆಗೆ ಒಡ್ಡುತ್ತಿದ್ದ. ಅವರ ನಡೆ-ನುಡಿಗಳ ಮಧ್ಯೆ ಸಾಮಂಜಸ್ಯವನ್ನು ಕಾಣುವ ಹಂಬಲ ಅವನಿಗೆ. ಇಂದು ನಾವು ಶ್ರೀರಾಮಕೃಷ್ಣರ ಬಹುಮುಖ ವ್ಯಕ್ತಿತ್ವವನ್ನು ನೋಡುತ್ತಿರುವುದು ಪ್ರಮುಖತಃ ನರೇಂದ್ರನ ಬರಹ ಹಾಗೂ ವಾಣಿಯ ಮೂಲಕವೇ. ತಮ್ಮ ಅಂತಃಸತ್ವವನ್ನು ಅವನು ತಿಳಿಯಲಿ ಎಂದು ಶ್ರೀರಾಮಕೃಷ್ಣರೇ ಪ್ರೋತ್ಸಾಹ ನೀಡುತ್ತಿದ್ದರು. "ಎಲ್ಲವೂ ಭಗವಂತನೇ ಆಗಿದ್ದಾನೆ" ಎಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ಅದರೊಂದಿಗೆ "ಮಾನವನೇ ದೇವರ ಪ್ರತಿರೂಪ. ಈಶ್ವರನ ಇಚ್ಛೆಯಂತೆ ಮನುಷ್ಯನ ಮೂಲಕವೇ ಅವನ ಸಾರಾಂಶ ವ್ಯಕ್ತವಾಗುತ್ತದೆ.. ಮರವನ್ನು ತೀಡುತ್ತ ತೀಡುತ್ತ ಬೆಂಕಿ ಬರುವಂತೆ, ಭಕ್ತಿಯ ಶಕ್ತಿಯಿದ್ದರೆ ಮನುಷ್ಯನಲ್ಲೇ ಈಶ್ವರನ ದರ್ಶನ ಸಾಧ್ಯ" ಎನ್ನುವುದು ಸನಾತನ ಧರ್ಮಕ್ಕೆ ಅವರು ನೀಡಿದ ಹೊಸ ಆಯಾಮ. ಇದನ್ನು ನರೇಂದ್ರನಲ್ಲಿ ರೂಢಿಸಿ ತನ್ಮೂಲಕ ತಾಯಿಯ ಕೆಲಸವನ್ನು ನೆರವೇರಿಸಬೇಕಿತ್ತು. ನರೇಂದ್ರನು ಒಮ್ಮೆ "ನಾನು ಸದಾ ಧ್ಯಾನತಲ್ಲೀನನಾಗಿದ್ದು, ಸಮಾಧಿಯಲ್ಲೇ ಇರಲು ಬಯಸುತ್ತೇನೆ," ಎಂದು ತನ್ನ ಇಂಗಿತವನ್ನು ವ್ಯಕ್ತಪಡಿಸಿದಾಗ ಶ್ರೀರಾಮಕೃಷ್ಣರ ಪ್ರತಿಕ್ರಿಯೆ ಹೇಗಿತ್ತು? "ಛೆ! ನೀನು ಇಷ್ಟು ಸಣ್ಣ ವ್ಯಕ್ತಿ ಎಂದು ನನಗೆ ಗೊತ್ತಿರಲಿಲ್ಲ. ವಿಶಾಲವಾದ ಆಲದ ಮರದಂತಿದ್ದು ಎಲ್ಲರಿಗೂ ನೆರಳು, ತ್ರಾಣಗಳನ್ನು ನೀಡುವೆಯೆಂದು ಭಾವಿಸಿದ್ದೆ. ಸಮಾಧಿಯ ಸ್ಥಿತಿಗಿಂತ ಉನ್ನತವಾದ ಒಂದು ಆದರ್ಶವಿದೆ" ಎಂದು ತಿಳಿಹೇಳಿ ಜಗತ್ತಿನ ದುಃಖವನ್ನು ಕಂಡು ಮಿಡಿಯುವಂತಹ ಹೃದಯವಂತಿಕೆಯನ್ನು ಅವನಲ್ಲಿ ಜಾಗೃತಗೊಳಿಸಿದರು. ತಮ್ಮ ಮಹಾಸಮಾಧಿಯ ಎರಡುದಿನ ಪೂರ್ವವೇ ತಮ್ಮೆಲ್ಲ ಅನುಭೂತಿ, ಶಕ್ತಿಯ ಐಶ್ವರ್ಯವನ್ನೂ ಅವನಿಗೆ ಧಾರೆಯೆರೆದು "ಫಕೀರ"ರಾದರು, ಅಂದರೆ ನರೇಂದ್ರನಲ್ಲಿ ಲೀನವಾದರು. ಇನ್ನು ನರೇಂದ್ರನ ಪ್ರತ್ಯೇಕ ಅಸ್ತಿತ್ವ ಇಲ್ಲವಾಯಿತು. ಆದ್ದರಿಂದಲೇ "ನರೇಂದ್ರ ನನ್ನ ಸ್ವಂತ ಆತ್ಮ" ಎಂದು ಅವರು ಘೋಷಿಸಿದ್ದು.

ಇವರೀರ್ವರ ನಡುವಣ ಸಂಬಂಧದ ಮಧುರತೆಯ ಹಿಂದೆ ಆಡಂಬರವಿರಲಿಲ್ಲ, ತೋರಿಕೆಯಿರಲಿಲ್ಲ, ಗುರು-ಶಿಷ್ಯ ಭೇದವಿರಲಿಲ್ಲ. "ಶ್ರೀರಾಮಕೃಷ್ಣರೊಡನೆ ನಾನು ಕಳೆದ ದಿನಗಳು ಅದೆಷ್ಟು ಆನಂದದಾಯಕವಾಗಿದ್ದವು ಎಂದು ಬೇರೆಯವರಿಗೆ ವಿವರಿಸುವುದು ಬಹಳ ಕಷ್ಟ. ಆಟ, ಮೋಜು ಹಾಗೂ ಉಳಿದ ದೈನಂದಿನ ಕಾರ್ಯಕಲಾಪಗಳ ಮೂಲಕ ಅವರು ನಮಗೆ ಅತ್ಯುನ್ನತವಾದ ಆಧ್ಯಾತ್ಮಿಕ ಶಿಕ್ಷಣವನ್ನು ನೀಡಿ ಜೀವನವನ್ನು ನಮ್ಮ ಅರಿವಿಲ್ಲದೆ ರೂಪಿಸಿದರು ಎನ್ನುವುದು ಆಶ್ಚರ್ಯಕರ ಸಂಗತಿ" ಎಂದು ನರೇಂದ್ರ ನಂತರದ ದಿನಗಳಲ್ಲಿ ಹೇಳುತ್ತಿದ್ದ. ಇವರಿಬ್ಬರ ಸಮಾಗಮದಲ್ಲಿ ಭಕ್ತಿ-ಜ್ಞಾನಗಳ, ಶ್ರದ್ಧೆ-ವಿಚಾರಗಳ, ಪುರಾತನ-ಆಧುನಿಕತೆಗಳ ಒಕ್ಕೂಟವನ್ನು ಜಗತ್ತು ಕಂಡಿತು. ಜಗತ್ತಿನ ಸಮಗ್ರ ಏಳ್ಗೆಗೆ ಇಂತಹ ಸಮನ್ವಯದ ಅವಶ್ಯಕತೆಯಿತ್ತು. ಅದನ್ನು ಪೂರೈಸುವುದಕ್ಕಾಗಿಯೇ ಇವರಿಬ್ಬರ ಅವತರಣವಾಗಿತ್ತು. ಶ್ರೀರಾಮಕೃಷ್ಣರ ಪ್ರೇಮದ ಸೆಲೆಯನ್ನು ಗ್ರಹಿಸಿ, ಧರಿಸಿ ಜಗತ್ತಿನಾದ್ಯಂತ ಸಿಂಪಡಿಸಿ, ಸತ್ಯ-ಧರ್ಮಗಳನ್ನು ದೃಢಪಡಿಸಿ ಮಾನವನ ಶ್ರೇಷ್ಠತೆಯನ್ನು "ಜೀವವೇ ಶಿವ" ಎಂದು ಸಾರಿದ ರಾಮಕೃಷ್ಣದೂತ ನರೇಂದ್ರ ಅಸಾಮಾನ್ಯ. "ನಾನೇನು ಮಹಾ! ಶ್ರೀರಾಮಕೃಷ್ಣರು ಬಯಸಿದರೆ ಧೂಳಿನಿಂದಲೇ ನೂರಾರು ವಿವೇಕಾನಂದರನ್ನು ತಯಾರು ಮಾಡಬಲ್ಲರು: " "ನನ್ನ ಮಾತುಗಳಲ್ಲಿ ಸತ್ಯಾಂಶವಿದ್ದರೆ, ಒಳ್ಳೆಯದಿದ್ದರೆ ಅದು ಶ್ರೀರಾಮಕೃಷ್ಣರಿಗೆ ಸೇರಿದ್ದು; ತಪ್ಪಿದ್ದರೆ ಅವು ನನ್ನವು" ಎಂದು ತಮ್ಮ ಗುರುಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು ಸ್ವಾಮೀಜಿ. ನಿಃಸ್ವಾರ್ಥವಾದ ಪ್ರೀತಿ ಹಾಗೂ ಮಹತ್ತರವಾದ, ಶುದ್ಧವಾದ ಜೀವನದಿಂದ ಮಾತ್ರ ಒಬ್ಬ ವ್ಯಕ್ತಿ ಮತ್ತೊಬ್ಬನ ಮೇಲೆ ಪ್ರಭಾವ ಬೀರಬಹುದು ಎಂಬುದಕ್ಕೆ ಇವರ ಜೀವನ ನಿದರ್ಶನ. ನರೇಂದ್ರನ್ನು ವಿವೇಕಾನಂದರನ್ನಾಗಿ ರೂಪಿಸಿ ಜಗತ್ತಿಗೆ ನೀಡಿದ್ದು ಶ್ರೀರಾಮಕೃಷ್ಣರ ಮಹಿಮೆಯಾದರೆ, ಅಜ್ಞಾತರಾಗಿದ್ದ ಶ್ರೀರಾಮಕೃಷ್ಣರಂತಹ ಅವತಾರವರಿಷ್ಠರನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ನರೇಂದ್ರನದು. ◆

**ನರೇಂದ್ರನು ಹೇಳುತ್ತಾನೆ : "ಅವರು (ಶ್ರೀರಾಮಕೃಷ್ಣರು) ನಿಜವಾಗಿಯೂ ಪ್ರೀತಿಯನ್ನೇ ಹಂಚುತ್ತಿರುವರು. ಅವರು ಪ್ರೀತಿ, ಭಕ್ತಿ, ದಿವ್ಯಜ್ಞಾನ, ಮುಕ್ತಿ ಮತ್ತು ಯಾರುಯಾರಿಗೆ ಏನೇನು ಬೇಕೊ ಅವೆಲ್ಲವನ್ನೂ ನೀಡುತ್ತಿರುವರು. ಹಾ ! ಅವರ ಅದ್ಭುತ ಶಕ್ತಿ! (ನರೇಂದ್ರನು ಮೌನವಾಗಿ, ನಿಶ್ಚಲವಾಗಿ ಸ್ವಲ್ಪಹೊತ್ತು ಕುಳಿತನು.) ನಾನು ಕೋಣೆಯಲ್ಲಿ ಹಾಸಿಗೆಯ ಮೇಲೆ ಮಲಗಿಕೊಂಡಿದ್ದೆ. ಒಳಗಡೆಯಿಂದ ಬಾಗಿಲಿನ ಅಗಳಿ ಹಾಕಿತ್ತು. ಆಗ ಇದ್ದಕ್ಕಿದ್ದಂತೆ ಈ ದೇಹದೊಳಗಿರುವ ಅವರು ನನ್ನನ್ನು ಆಕರ್ಷಿಸಿ ದಕ್ಷಿಣೇಶ್ವರಕ್ಕೆ ಕರೆದುಕೊಂಡು ಹೋದರು. ನನಗೆ ಹಲವು ಸಲಹೆಗಳನ್ನಿತ್ತು ಅನೇಕ ವಿಷಯಗಳನ್ನು ಕುರಿತು ಮಾತನಾಡಿದ ನಂತರ ಅವರು ಹಿಂತಿರುಗಲು ಬಿಟ್ಟರು. ಅವರು ಏನೂ ಮಾಡಬಲ್ಲರು. ಅವರಿಗೆ ಅಸಾಧ್ಯವೆಂಬುದು ಯಾವುದೂ ಇಲ್ಲ."**

*ಸ್ಥಳದಾನ:* ನಂಟಸಿ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು